8. ಇನ್ನೂಳಿದ ಅ.ಸಂ.1, 4, 6 ರ ವರೆಗಿನ ಕಾಮಗಾರಿಗಳನ್ನು ಸ್ಪೆಸಿಫಿಕೇಶನ್‌ಗಳಿಗೆ ಅನುಗುಣವಾಗಿ ಅವಶ್ಯವಿರುವ ಸೂಕ್ತ ಯಂತ್ರೋಪಕರಣಗಳನ್ನು ಉಪಯೋಗಿಸಿ ನಿರ್ವಹಿಸಬೇಕು.
9. ಸದರಿ ಕಾಮಗಾರಿಗಳಿಗೆ ಕಾರ್ಮಿಕ ಕಲ್ಯಾಣ ಸುಂಕವೆಂದು ಶೇಕಡಾ 1 ರಷ್ಟು ಹಣವನ್ನು ಬಿಲ್ಲುಗಳಲ್ಲಿ ಕಟಾಯಿಸಲಾಗುವುದು.

ಟಿಪ್ಪಣಿ: ಮೇಲೆ ನಮೂದಿಸಿದ ದಿನಾಂಕಗಳು ಸಾರ್ವತ್ರಿಕ ರಜಾ ದಿನದಂದು ಘೋಷಿಸಿದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸುವುದು. ಹೆಚ್ಚಿನ ವಿವರಗಳನ್ನು ಈ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ರಮೇಶ ಡಿ. ಕಟ್ಟಿಮನಿ

ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ ಲೋಕೋಪಯೋಗಿ

ಪಿ.ಆರ್. 226

ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ,

ವಿಜಾಪೂರ.

ಕಾರ್ಯನಿರ್ವಾಹಕ ಇಂಜಿನೀಯರರು, ಲೋ.ಬಂ.ಮತ್ತು ಒ.ಜ.,ಸಾ.ಇಲಾಖೆ
ಕಾರ್ಯಾಲಯ, ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ವಿಜಾಪೂರ

ಟೆಂಡರ್ ಪ್ರಕಟಣೆ

ನಂ.ಲೋ.ಇ./ವಿ.ವಿ/ಬಿಜೆ/ಟಿಎ/ಡಿಬಿ/ಪಿಬಿ/ಠೇವಣಿ ವಂತಿಕೆ/2007–08/4641, ದಿನಾಂಕ: 20ನೇ ಮಾರ್ಚ್ 2008

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ದ್ವಿ ಪ್ರತಿಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು – 2000ರ ಪ್ರಕಾರ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ ಆಹ್ವಾನಿಸಲಾಗಿದೆ.

1. ಖುಲ್ಲಾ ಟೆಂಡರ್ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 21.04.2008 ಕಚೇರಿ ವೇಳೆಯಲ್ಲಿ.
2. ಖುಲ್ಲಾ ಟೆಂಡರ್ ಫಾರ್ಮಗಳನ್ನು ವಿತರಿಸುವ ದಿನಾಂಕ 23.04.2008
3. ತುಂಬಿದ ಮೊಹರ ಬಂದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ 25.04.2008 ಮಧ್ಯಾಹ್ನ 1.00 ಗಂಟೆಯವರೆಗೆ

ಕಾಮಗಾರಿಯ ಟೆಂಡರ್ 2 ಲಕೋಟೆಗಳನ್ನು ಅಂದರೆ 1) ತಾಂತ್ರಿಕ ಬಿಡ್ ಮತ್ತು 2) ಆರ್ಥಿಕ ಬಿಡ್‌ಗಳನ್ನು ಒಳಗೊಂಡಿರುತ್ತದೆ.

1) ಗುತ್ತಿಗೆದಾರರು ತಾಂತ್ರಿಕ ಬಿಡ್‌ನ್ನು ದ್ವಿಪ್ರತಿಗಳಲ್ಲಿ ನಿಗದಿತ ರೀತಿಯಲ್ಲಿ ಭರ್ತಿ ಮಾಡಿ ಅವಶ್ಯಕ ದೃಢೀಕೃತ ದಾಖಲಾತಿಗಳನ್ನು ಲಗತ್ತಿಸಿ ಲಕೋಟೆಯಲ್ಲಿ ಮೊಹರು ಮಾಡಿ ಲಕೋಟೆಯ ಮೇಲೆ ತಾಂತ್ರಿಕ ಬಿಡ್ ಎಂದು ನಮೂದಿಸಿ ಕಾಮಗಾರಿಯ ಹೆಸರು ಮತ್ತು ಗುತ್ತಿಗೆದಾರರ ಪೂರ್ಣ ವಿಳಾಸವನ್ನು ನಮೂದಿಸತಕ್ಕದ್ದು.
2) ಗುತ್ತಿಗೆದಾರರು ಆರ್ಥಿಕ ಬಿಡ್‌ನ್ನು ದ್ವಿಪ್ರತಿಗಳಲ್ಲಿ ನಿಗದಿತ ರೀತಿಯಲ್ಲಿ ಭರ್ತಿ ಮಾಡಿ ಶೆಡ್ಯೂಲ್ 'ಬಿ' ನಲ್ಲಿ ದರಗಳನ್ನು ನಿಗದಿತ ರೀತಿಯಲ್ಲಿ ಭರ್ತಿ ಮಾಡಿ ಲಕೋಟೆಯಲ್ಲಿ ಮೊಹರು ಮಾಡಿ ಲಕೋಟೆಯ ಮೇಲೆ ಆರ್ಥಿಕ ಬಿಡ್ ಎಂದು ನಮೂದಿಸಿ ಕಾಮಗಾರಿಯ ಹೆಸರು ಮತ್ತು ಗುತ್ತಿಗೆದಾರರ ಪೂರ್ಣ ವಿಳಾಸವನ್ನು ನಮೂದಿಸತಕ್ಕದ್ದು.

ಮೇಲ್ಕಂಡ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ಎರಡನ್ನೂ ಇನ್ನೊಂದು ಲಕೋಟೆಯಲ್ಲಿ ಹಾಕಿ ಕಾಮಗಾರಿಯ ಹೆಸರು ಹಾಗೂ ಗುತ್ತಿಗೆದಾರರ ಪೂರ್ಣ ವಿಳಾಸ ನಮೂದಿಸಿ ಮೊಹರು ಮಾಡಿರುವ ಟೆಂಡರುಗಳನ್ನು ಈ ಕೆಳಗೆ ಸಹಿ ಮಾಡಿದ ಕಾರ್ಯಪಾಲಕ ಇಂಜನೀಯರ್, ಲೋಕೋಪಯೋಗಿ ವಿಭಾಗ, ವಿಜಾಪೂರ ಇವರ ಕಾರ್ಯಾಲಯದಲ್ಲಿ ಈ ಮೇಲೆ ನಮೂದಿಸಿರುವ ದಿನಾಂಕದಂದು ಸ್ವೀಕರಿಸಲಾಗುವುದು.

ತಾಂತ್ರಿಕ ಬಿಡ್‌ನ್ನು ದಿನಾಂಕ: 25.04.2008 ರಂದು ಅಥವಾ ಸೂಕ್ತ ದಿನಾಂಕದಂದು ಮೊದಲು ತೆರೆಯಲಾಗುವುದು. ತೃಪ್ತಿಕರವಾದ ವಿವರಗಳನ್ನು ಸಲ್ಲಿಸಿದ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ನಂತರ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಈ ವಿಷಯದಲ್ಲಿ ಸಕ್ಷಮ ಅಧಿಕಾರಿಗಳ ನಿರ್ಧಾರವು ಅಂತಿಮವಾಗಿರುತ್ತದೆ. ಯಾವುದೇ ಕಾರಣಕ್ಕೂ ಫಾಮ್ ಬೆಲೆಯನ್ನು ಹಿಂದಿರುಗಿಸಲಾಗುವುದಿಲ್ಲ. ಮೇಲೆ ನಮೂದಿಸಿದ ದಿನಾಂಕಗಳು ಸಾರ್ವತ್ರಿಕ ರಜಾ ದಿನವೆಂದು ಘೋಷಿಸಿದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸುವುದು. ಹೆಚ್ಚಿನ ವಿವರಗಳನ್ನು ಈ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟಿರುವ ಹಣ ರೂ.ಲಕ್ಷಗಳಲ್ಲಿ	ಮುಂಗಡ ಠೇವಣಿ ಹಣ ರೂ.ಗಳಲ್ಲಿ	ಟೆಂಡರು ಫಾರಂಗಳ ಬೆಲೆ ತೆರಿಗೆ ಸಹಿತ ರೂ.ಗಳಲ್ಲಿ	ಅರ್ಹ ಗುತ್ತಿಗೆದಾರರ ದರ್ಜೆ	ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ (ಮಳೆಗಾಲ ಸೇರಿ)
8443–ಠೇವಣಿ ವಂತಿಕೆ						
1.	ಮಹಾರಾಷ್ಟ್ರ ರಾಜ್ಯದ ಪಂಡರಪುರದಲ್ಲಿ ಕರ್ನಾಟಕ ರಾಜ್ಯ ಛತ್ರವನ್ನು ನಿರ್ಮಿಸುವುದು.	139.00	1,39,000/–	5500/–	ವರ್ಗ–1	12 ತಿಂಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟಿರುವ ಹಣ ರೂ.ಲಕ್ಷಗಳಲ್ಲಿ	ಮುಂಗಡ ಠೇವಣಿ ಹಣ ರೂ.ಗಳಲ್ಲಿ	ಟೆಂಡರು ಫಾರಂಗಳ ಬೆಲೆ ತೆರಿಗೆ ಸಹಿತ ರೂ.ಗಳಲ್ಲಿ	ಅರ್ಹ ಗುತ್ತಿಗೆದಾರರ ದರ್ಜೆ	ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ (ಮಳೆಗಾಲ ಸೇರಿ)
2.	ಮಹಾರಾಷ್ಟ್ರ ರಾಜ್ಯದ ತುಳಜಾಪುರದಲ್ಲಿ ನಿರ್ಮಿಸುತ್ತಿರುವ ಕರ್ನಾಟಕ ರಾಜ್ಯ ಛತ್ರಕ್ಕೆ ಆವರಣ ಗೋಡೆ ನಿರ್ಮಿಸುವುದು.	10.00	20,000/–	1100/–	ವರ್ಗ–3 ಮತ್ತು ಮೇಲ್ಪಟ್ಟು	3 ತಿಂಗಳು
3.	ವಿಜಾಪೂರದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಹಾಸ್ಟೇಲ ಕಟ್ಟಡ (ನೆಲ ಮಹಡಿ–ಉಳಿದ ಭಾಗ) ನಿರ್ಮಾಣ ಮಾಡುವುದು.	37.00	37,000/–	3300/–	ವರ್ಗ–1	6 ತಿಂಗಳು
4.	ವಿಜಾಪೂರದಲ್ಲಿ ಬಾಲಕಿಯರ ಬಾಲಮಂದಿರ ಸಂಸ್ಥೆಯ ಕಟ್ಟಡ ನಿರ್ಮಾಣ	50.00	50,000/–	3300/–	ವರ್ಗ–1	6 ತಿಂಗಳು

ನಿಬಂಧನೆಗಳು:–

1. ಗುತ್ತಿಗೆದಾರರು ಟೆಂಡರಿಗಿಟ್ಟ ಮೊತ್ತದ ಶೇಕಡಾ 30% ಮೊತ್ತದ ಇಂತಹದೇ ಆದ ಒಂದು ಕಾಮಗಾರಿಯನ್ನು ಹಿಂದಿನ 5 ಆರ್ಥಿಕ ವರ್ಷಗಳಲ್ಲಿ ಯಾವುದಾದರೂ ಒಂದು ಆರ್ಥಿಕ ವರ್ಷದಲ್ಲಿ ತೃಪ್ತಿಕರವಾಗಿ ನಿರ್ವಹಿಸಿರಬೇಕು. (ಕಾಮಗಾರಿ ಮೊತ್ತವನ್ನು ಕಾಮಗಾರಿ ಪೂರ್ತಿಗೊಂಡ ಆರ್ಥಿಕ ವರ್ಷದಿಂದ ಈ ವರ್ಷದ ವರೆಗೆ ಶೇಕಡಾ 10% ರಂತೆ ಪ್ರತಿ ವರ್ಷಕ್ಕೆ ಲೆಕ್ಕ ಹಾಕುವುದು. ಅಲ್ಲದೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದರೆ ಟೆಂಡರಿಗಿಟ್ಟ ಮೊತ್ತದ ಶೇಕಡಾ 30% ಬಿಲ್ ಆಗಿರಬೇಕು) ಸದರ ಪ್ರಮಾಣ ಪತ್ರವನ್ನು ಕಾರ್ಯನಿರ್ವಾಹಕ ಅಭಿಯಂತರರು ಅಥವಾ ಮೇಲ್ಪಟ್ಟು ಅಧಿಕಾರಿಗಳಿಂದ ಇಲ್ಲವೇ ನೋಟರಿಯವರಿಂದ ಧೃಢೀಕರಿಸಿ ಅರ್ಜಿಯೊಂದಿಗೆ ಸಲ್ಲಿಸುವುದು.
2. ಮೇಲೆ ನಮೂದಿಸಿದ ಕೆಲಸದ ಟೆಂಡರ್‌ಗಳಲ್ಲಿ ಭಾಗವಹಿಸಲಿಚ್ಚಿಸುವ ಗುತ್ತಿಗೆದಾರರು ನಿಗದಿತ ಟೆಂಡರ್ ಫಾರ್ಮ ಬೆಲೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಲೋ.ಇ.ವಿಭಾಗ,ವಿಜಾಪೂರ ಇವರ ಹೆಸರಿನಲ್ಲಿ ಹಣ ಪಾವತಿಯಾಗುವಂತೆ ಡಿಮಾಂಡ್ ಡ್ರಾಫ್ಟನ್ನು ಪಡೆದು ಅರ್ಜಿಯ ಜೊತೆಯಲ್ಲಿ ಲಗತ್ತಿಸಿ, ಗುತ್ತಿಗೆ ನೊಂದಣಿ ಪ್ರತಿಯನ್ನು ನಿಗದಿತ ದಿನಾಂಕದಂದು ಸಲ್ಲಿಸುವುದು.
3. ಖಾಲಿ ಟೆಂಡರ್ ಫಾರಂ ವಿತರಿಸುವಾಗ ಗುತ್ತಿಗೆದಾರರ ನೋಂದಣಿ ಪುಸ್ತಕವನ್ನು ಕಡ್ಡಾಯವಾಗಿ ಹಾಜರುಪಡಿಸಿ ಅದರಲ್ಲಿ ಕಾಮಗಾರಿಗಳ ವಿವರಗಳನ್ನು ದಾಖಲಿಸಿಕೊಳ್ಳತಕ್ಕದ್ದು.
4. ಕಾಮಗಾರಿಗೆ ಅವಶ್ಯಕವಿರುವ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು ಮತ್ತು ಇಲಾಖಾವತಿಯಿಂದ ಯಾವುದೇ ಸಾಮಗ್ರಿಗಳನ್ನು ನೀಡಲಾಗುವುದಿಲ್ಲ. ಗುತ್ತಿಗೆದಾರರು ಸೆಂಟ್ರಿಂಗ್ ಪ್ಲೇಟಗಳು – 300 ಚದುರ ಮೀಟರುಗಳು ಹಾಪರ್ ಇರುವ ಕಾಂಕ್ರೀಟ ಮಿಕ್ಸರ್ – 2 ನಂ. ಪ್ಲೇಟ ವ್ಹಾಯಿಬ್ರೇಟರ್ – 2 ನಂ. ಮತ್ತು ನೀಡಲ್ ವ್ಹಾಯಿಬ್ರೇಟರ್ – 2 ನಂ. ಮುಂತಾದ ಸಲಕರಣೆಗಳನ್ನು ಸ್ವಂತ ಅಥವಾ ಬಾಡಿಗೆ ರೂಪದಲ್ಲಿ ಹೊಂದಿರಬೇಕು. (ಟೆಂಡರ್ ಸಲ್ಲಿಸುವಾಗ ಗುತ್ತಿಗೆದಾರರು ಯಂತ್ರೋಪಕರಣಗಳ ದೃಢೀಕೃತ ದಾಖಲೆಗಳನ್ನು ಒದಗಿಸಬೇಕು). ಪೂರೈಸುವ ಸಾಮಗ್ರಿಗಳನ್ನು ಇಲಾಖೆಯು ಸೂಚಿಸಿದ ಪರೀಕ್ಷಣಾ ಕೇಂದ್ರದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಪರೀಕ್ಷಿಸಿಕೊಂಡು ಸಂಬಂಧ ಪಟ್ಟ ಅಧಿಕಾರಿಗಳಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿ ಅನುಮತಿ ಪಡೆದುಕೊಂಡು ಸಾಮಗ್ರಿಗಳನ್ನು ಕೆಲಸಕ್ಕೆ ಉಪಯೋಗಿಸಬೇಕಾಗುತ್ತದೆ.
5. ಟೆಂಡರ್ ಜೊತೆಯಲ್ಲಿ ಮುಂಗಡ ಠೇವಣಿ (ಇ.ಎಂ.ಡಿ) ಯನ್ನು ನ್ಯಾಶನಲಾಯಿಜ್ಡ/ ಶೆಡ್ಯೂಲ್ಡ್ ಬ್ಯಾಂಕನಿಂದ ಕಾರ್ಯನಿರ್ವಾಹಕ ಇಂಜನೀಯರರು, ಲೋ.ಇ.ವಿಭಾಗ ವಿಜಾಪೂರ ಇವರ ಹೆಸರಿನಲ್ಲಿ ಪಡೆದ ಡಿಮ್ಯಾಂಡ್ ಡ್ರಾಫ್ಟ/ಡಿಪಾಸಿಟ್ ಕಾಲ್ ರಿಸಿಪ್ಟ: / ಬ್ಯಾಂಕರ್ಸ ಚೆಕ್/ಪೇ ಆರ್ಡರ್ ಅಥವಾ ಕಾರ್ಯಪಾಲಕ ಅಭಿಯಂತರರು, ಲೋ.ಇ. ವಿಭಾಗ, ವಿಜಾಪೂರ ಇವರ ಹೆಸರಿನಲ್ಲಿ ಪ್ಲೆಡ್ಜ್ ಮಾಡಿದ ರಾಷ್ಟ್ರೀಯ ಉಳಿತಾಯ ಪತ್ರಗಳ ರೂಪದಲ್ಲಿ

ಸಲ್ಲಿಸುವುದು. ಪ್ಲೆಡ್ಜ ಮಾಡದೇ ಇದ್ದ ಗುತ್ತಿಗೆಯನ್ನು ತಿರಸ್ಕರಿಸಲಾಗುವುದು. ಇ.ಎಂ.ಡಿ.ಗಳ ವ್ಯಾಲಿಡಿಟಿ ಅವಧಿ 90 ದಿನಗಳು.

6. ಯಾವುದೇ ಕಾರಣವಿಲ್ಲದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಲೋಕೋಪಯೋಗಿ ಇಲಾಖೆಗೆ ಸಕ್ಷಮ ಅಧಿಕಾರಿಗಳು ಕಾಯ್ದಿರಿಸಿಕೊಂಡಿದ್ದಾರೆ.
7. ಸದರಿ ಕಾಮಗಾರಿಗಳು ಠೇವಣಿ ವಂತಿಕೆ ಕಾಮಗಾರಿಗಳಾಗಿರುವುದರಿಂದ ಮಂಜೂರಾದ ಅಂದಾಜಿನ ದರಗಳಿಗಿಂತ ಹೆಚ್ಚಿನ ದರಗಳನ್ನು ನೀಡಲಾಗುವುದಿಲ್ಲ.
8. ಸದರಿ ಕಾಮಗಾರಿಗಳಿಗೆ ಗುತ್ತಿಗೆಗೆ ಇಟ್ಟ ಮೊತ್ತದ ಶೇಕಡಾ 1% ರಷ್ಟು ಹಣವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿ ಕಾರ್ಮಿಕ ಕಲ್ಯಾಣ ಸುಂಕವೆಂದು ಬಿಲ್ಲಿನಲ್ಲಿ ಮುರಿದು ಕಾರ್ಮಿಕ ಇಲಾಖೆಗೆ ಪಾವತಿಸಲಾಗುವುದು.
9. ಕ್ರಮ ಸಂಖ್ಯೆ 2,3, ಮತ್ತು 4 ರ ಕಾಮಗಾರಿಗಳಿಗೆ ತಾಂತರಿಕ ಬಿಡ್ ಅನ್ವಯಿಸುವುದಿಲ್ಲ.

ರಮೇಶ ಡಿ. ಕಟ್ಟಿಮನಿ
ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ
ಇಲಾಖೆ, ವಿಭಾಗ, ವಿಜಾಪೂರ.

ಪಿ.ಆರ್. 227

ಕಾರ್ಯನಿರ್ವಾಹಕ ಇಂಜಿನೀಯರರು, ಲೋ.ಬಂ.ಮತ್ತು ಒ.ಜ.,ಸಾ.ಇಲಾಖೆ

ಕಾರ್ಯಾಲಯ, ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ವಿಜಾಪೂರ

ಟೆಂಡರ್ ಪ್ರಕಟಣೆ

ನಂ.ಲೋ.ಇ./ವಿ.ವಿ/ಬಿಜೆ/ಟಿಎ/ಪಿಬಿ/ನಬಾರ್ಡ–12/2007–08/4642, ದಿನಾಂಕ: 20ನೇ ಮಾರ್ಚ್ 2008

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗೆ ಐಟಂವಾರು ಟೆಂಡರ್‌ಗಳನ್ನು ದ್ವಿ ಪ್ರತಿಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು – 2000ರ ಪ್ರಕಾರ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ, 574 ದಿನಾಂಕ: 31.5.2007 ಮತ್ತು 728 ದಿನಾಂಕ: 11.6.2007 ರಲ್ಲಿ ಆಹ್ವಾನಿಸಲಾಗಿದ್ದು ಕಾರಣಾಂತರಗಳಿಂದ ಈ ಕೆಳಗಿನಂತೆ ತಿದ್ದುಪಡಿ ಹಾಗೂ ಅವಧಿ ವಿಸ್ತರಣೆ ಮಾಡಲಾಗಿದೆ.

1. ಖಲ್ಲಾ ಟೆಂಡರ್ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 21.04.2008 ಕಚೇರಿ ವೇಳೆಯಲ್ಲಿ.
2. ಖಲ್ಲಾ ಟೆಂಡರ್ ಫಾರ್ಮಗಳನ್ನು ವಿತರಿಸುವ ದಿನಾಂಕ 23.04.2008
3. ತುಂಬಿದ ಮೊಹರ ಬಂದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ 25.04.2008 ಮಧ್ಯಾಹ್ನ 1.00 ಗಂಟೆಯವರೆಗೆ

ಮೇಲೆ ನಮೂದಿಸಿದ ದಿನಾಂಕಗಳು ಸಾರ್ವತ್ರಿಕ ರಜಾ ದಿನವೆಂದು ಘೋಷಿಸಿದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸುವುದು. ಹೆಚ್ಚಿನ ವಿವರಗಳನ್ನು ಈ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟಿರುವ ಹಣ ರೂ.ಲಕ್ಷಗಳಲ್ಲಿ	ಮುಂಗಡ ಠೇವಣಿ ಹಣ ರೂ.ಗಳಲ್ಲಿ	ಟೆಂಡರು ಫಾರಂಗಳ ಬೆಲೆ ತೆರಿಗೆ ಸಹಿತ ರೂ.ಗಳಲ್ಲಿ	ಅರ್ಹ ಗುತ್ತಿಗೆದಾರರ ದರ್ಜೆ	ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ (ಮಳೆಗಾಲ ಸೇರಿ)
ನಬಾರ್ಡ ಆರ್.ಐ.ಡಿ.ಎಫ್–12						
1.	ನಬಾರ್ಡ ಆರ್. ಐ.ಡಿ.ಎಫ್–12ರ ಅಡಿಯಲ್ಲಿ ವಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಝುಳಕಿಯಲ್ಲಿ ಪಿ.ಯು.ಕಾಲೇಜ್ ಕಟ್ಟಡದ 4 ಕೋಣೆಗಳ ನಿರ್ಮಾಣ	19.40	29,100/–	2200/–	ವರ್ಗ–2 ಮತ್ತು ಮೇಲ್ಪಟ್ಟು	3 ತಿಂಗಳು

ನಿಬಂಧನೆಗಳು:–

1. ಗುತ್ತಿಗೆದಾರರು ಟೆಂಡರಿಗಿಟ್ಟ ಮೊತ್ತದ ಶೇಕಡಾ 30% ಮೊತ್ತದ ಇಂತಹದೇ ಆದ ಒಂದು ಕಾಮಗಾರಿಯನ್ನು ಹಿಂದಿನ 5 ಆರ್ಥಿಕ ವರ್ಷಗಳಲ್ಲಿ ಯಾವುದಾದರೂ ಒಂದು ಆರ್ಥಿಕ ವರ್ಷದಲ್ಲಿ ತೃಪ್ತಿಕರವಾಗಿ

ನಿರ್ವಹಿಸಿರಬೇಕು. (ಕಾಮಗಾರಿ ಮೊತ್ತವನ್ನು ಕಾಮಗಾರಿ ಪೂರ್ತಿಗೊಂಡ ಆರ್ಥಿಕ ವರ್ಷದಿಂದ ಈ ವರ್ಷದ ವರೆಗೆ ಶೇಕಡಾ 10% ರಂತೆ ಪ್ರತಿ ವರ್ಷಕ್ಕೆ ಲೆಕ್ಕ ಹಾಕುವುದು. ಅಲ್ಲದೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದರೆ ಟೆಂಡರಿಗಿಟ್ಟ ಮೊತ್ತದ ಶೇಕಡಾ 30% ಬಿಲ್ ಆಗಿರಬೇಕು) ಸದರ ಪ್ರಮಾಣ ಪತ್ರವನ್ನು ಕಾರ್ಯನಿರ್ವಾಹಕ ಅಭಿಯಂತರರು ಅಥವಾ ಮೇಲ್ಪಟ್ಟು ಅಧಿಕಾರಿಗಳಿಂದ ಇಲ್ಲವೇ ನೋಟರಿಯವರಿಂದ ಧೃಢೀಕರಿಸಿ ಅರ್ಜಿಯೊಂದಿಗೆ ಸಲ್ಲಿಸುವುದು.

2. ಮೇಲೆ ನಮೂದಿಸಿದ ಕೆಲಸದ ಟೆಂಡರ್‌ಗಳಲ್ಲಿ ಭಾಗವಹಿಸಲಿಚ್ಚಿಸುವ ಗುತ್ತಿಗೆದಾರರು ನಿಗದಿತ ಟೆಂಡರ್ ಫಾರ್ಮ ಬೆಲೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಲೋ.ಇ.ವಿಭಾಗ,ವಿಜಾಪೂರ ಇವರ ಹೆಸರಿನಲ್ಲಿ ಹಣ ಪಾವತಿಯಾಗುವಂತೆ ಡಿಮಾಂಡ್ ಡ್ರಾಫ್ಟನ್ನು ಪಡೆದು ಅರ್ಜಿಯ ಜೊತೆಯಲ್ಲಿ ಲಗತ್ತಿಸಿ, ಗುತ್ತಿಗೆ ನೊಂದಣಿ ಪ್ರತಿಯನ್ನು ನಿಗದಿತ ದಿನಾಂಕದಂದು ಸಲ್ಲಿಸುವುದು.
3. ಖಾಲಿ ಟೆಂಡರ್ ಫಾರಂ ವಿತರಿಸುವಾಗ ಗುತ್ತಿಗೆದಾರರ ನೋಂದಣಿ ಪುಸ್ತಕವನ್ನು ಕಡ್ಡಾಯವಾಗಿ ಹಾಜರುಪಡಿಸಿ ಅದರಲ್ಲಿ ಕಾಮಗಾರಿಗಳ ವಿವರಗಳನ್ನು ದಾಖಲಿಸಿಕೊಳ್ಳತಕ್ಕದ್ದು.
4. ಕಾಮಗಾರಿಗೆ ಅವಶ್ಯಕವಿರುವ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು ಮತ್ತು ಇಲಾಖಾವತಿಯಿಂದ ಯಾವುದೇ ಸಾಮಗ್ರಿಗಳನ್ನು ನೀಡಲಾಗುವುದಿಲ್ಲ.
5. ಟೆಂಡರ್ ಜೊತೆಯಲ್ಲಿ ಮುಂಗಡ ಠೇವಣಿ (ಇ.ಎಂ.ಡಿ) ಯನ್ನು ನ್ಯಾಶನಲಾಯಿಜ್ಡ/ ಶೆಡ್ಯೂಲ್ಡ್ ಬ್ಯಾಂಕನಿಂದ ಕಾರ್ಯನಿರ್ವಾಹಕರು ಲೋ.ಇ.ವಿಭಾಗ ವಿಜಾಪೂರ ಇವರ ಹೆಸರಿನಲ್ಲಿ ಪಡೆದು ಡಿಮ್ಯಾಂಡ್ ಡ್ರಾಫ್ಟ್/ಡಿಪಾಸಿಟ್ ಕಾಲ್ ರಿಸಿಪ್ಟ್: / ಬ್ಯಾಂಕರ್ಸ ಚೆಕ್/ಪೇ ಆರ್ಡರ್ ಅಥವಾ ಕಾರ್ಯಪಾಲಕ ಅಭಿಯಂತರರು, ಲೋ.ಇ. ವಿಭಾಗ, ವಿಜಾಪೂರ ಇವರ ಹೆಸರಿನಲ್ಲಿ ಪ್ಲೆಡ್ಜ್ ಮಾಡಿದ ರಾಷ್ಟ್ರೀಯ ಉಳಿತಾಯ ಪತ್ರಗಳ ರೂಪದಲ್ಲಿ ಸಲ್ಲಿಸುವುದು. ಪ್ಲೆಡ್ಜ ಮಾಡದೇ ಇದ್ದ ಗುತ್ತಿಗೆಯನ್ನು ತಿರಸ್ಕರಿಸಲಾಗುವುದು. ಇ.ಎಂ.ಡಿ.ಗಳ ವ್ಯಾಲಿಡಿಟಿ ಅವಧಿ 90 ದಿನಗಳು.
6. ಯಾವುದೇ ಕಾರಣವಿಲ್ಲದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಲೋಕೋಪಯೋಗಿ ಇಲಾಖೆಗೆ ಸಕ್ಷಮ ಅಧಿಕಾರಿಗಳು ಕಾಯ್ದಿರಿಸಿಕೊಂಡಿದ್ದಾರೆ.

ರಮೇಶ ಡಿ. ಕಟ್ಟಿಮನಿ
ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ
ಇಲಾಖೆ, ವಿಭಾಗ, ವಿಜಾಪೂರ.

ಪಿ.ಆರ್. 228

ಪೊಲೀಸ್ ಅಧೀಕ್ಷಕರವರ ಕಛೇರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಬಹಿರಂಗ ಹರಾಜು ಪ್ರಕಟಣೆ

ನಂ.ಲೆಕ್ಕ(5)135/2005, ದಿನಾಂಕ: 3ನೇ ಏಪ್ರಿಲ್ 2008

ವಿಷಯ: ಚಿಕ್ಕಮಗಳೂರು ಜಿಲ್ಲೆಯ ಪೊಲೀಸ್ ಇಲಾಖೆಯ ನಿರುಪಯುಕ್ತಗೊಳಿಸಲಾಗಿರುವ 3 ಮಹೇಂದ್ರ ಕಂಪನಿಯ ವಾಹನಗಳನ್ನು ಟೆಂಡರ್ ಕಂ ಹರಾಜು ಮೂಲಕ ದಿ:26.4.2008 ರಂದು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1. ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ರವರ ಆದೇಶ ನಂ. ವಾಸಾ(1)59/07–08, ದಿನಾಂಕ:19.2.2008.
2. ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ರವರ ಹಿಂಬರಹ ನಂ. ವಾಸಾ(1)26/06–07 ದಿ:5.7.2007.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಉಲ್ಲೇಖಿತ ಆದೇಶದಲ್ಲಿ ನಿರುಪಯುಕ್ತಗೊಳಿಸಲಾಗಿರುವ ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ಇಲಾಖೆಯ ಈ ಕೆಳಕಂಡ ವಾಹನಗಳನ್ನು ದಿನಾಂಕ:26.04.2008 ರಂದು ಬೆಳಿಗ್ಗೆ 10.00 ಗಂಟೆಗೆ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಆವರಣ, ರಾಮನಹಳ್ಳಿ ಚಿಕ್ಕಮಗಳೂರು ಇಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತಿವುಳ್ಳವರು ಭಾಗವಹಿಸಬಹುದು, ನಿರುಪಯುಕ್ತ ವಾಹನಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಾಹನದ ನೊಂದಣಿ ಸಂಖ್ಯೆ	ಮಾದರಿ	ಖರೀದಿಸಿದ ವರ್ಷ
1	ಕೆಎ.18–ಜಿ.59	ಮಹೇಂದ್ರ ಜೀಪು	1992
2	ಸಿಎಜಿ.3878	ಮಹೇಂದ್ರ ಜೀಪು	1988
3	ಕೆಎ.18–ಜಿ.29	ಮಹೇಂದ್ರ ಜೀಪು	1991

ಹರಾಜಿನ ಷರತ್ತುಗಳು:–

1. ನಿರುಪಯುಕ್ತ ವಾಹನಗಳು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಆವರಣ, ರಾಮನಹಳ್ಳಿ, ಚಿಕ್ಕಮಗಳೂರಿನಲ್ಲಿ ಹಾಲಿ ಯಾವ ಸ್ಥಿತಿಯಲ್ಲಿ ಇರುತ್ತವೆಯೋ ಅದೇ ಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು.
2. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವ ಪ್ರತಿಯೊಬ್ಬರು ಒಂದು ನಿರೂಪಯುಕ್ತ ವಾಹನಕ್ಕೆ ರೂ.3,000–00 ಗಳಂತೆ ಠೇವಣಿ ಹಣವನ್ನು ಹರಾಜಿನ ಮುನ್ನ ನಗದಾಗಿ ಪಾವತಿಸತಕ್ಕದ್ದು. ಠೇವಣಿ ಹಣ ಪಾವತಿಸದವರು ಹರಾಜಿನಲ್ಲಿ ಭಾಗವಹಿಸುವಂತಿಲ್ಲ.
3. ಈ ನಿರುಪಯುಕ್ತ ವಾಹನಗಳ ಖರೀದಿಗೆ ಟೆಂಡರ್ ಸಲ್ಲಿಸಬಯಸುವ ಆಸಕ್ತ ಸಾರ್ವಜನಿಕರು ಜೀಪುಗಳಿಗೆ ಒಂದಕ್ಕೆ ರೂ.3,000–00 ಗಳಂತೆ ಠೇವಣಿ ಹಣವನ್ನು "ಪೊಲೀಸ್ ಸೂಪರಿಂಟೆಂಡೆಂಟ್, ಚಿಕ್ಕಮಗಳೂರು ಜಿಲ್ಲೆ" ಇವರ ನಗದು ಶಾಖೆಯಲ್ಲಿ ನಗದು ತುಂಬಿ ನಿರುಪಯುಕ್ತ ವಾಹನಗಳ ಖರೀದಿಗಾಗಿ ಎಂದು ಸ್ಪಷ್ಟವಾಗಿ ನಮೂದಿಸಿದ ಪಟ್ಟಿ ಮಾಡಲಾದ ಟೆಂಡರ್‌ಗಳನ್ನು ದಿನಾಂಕ 24.4.2008ರ ಸಂಜೆ 4.00 ಗಂಟೆಯ ಒಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸಬೇಕು (ಟೆಂಡರ್ ಫಾರಂ ನಮೂನೆಯನ್ನು ಈ ಅಧಿಸೂಚನೆಯ ಕೊನೆಯಲ್ಲಿ ಕೊಡಲಾಗಿದೆ)
4. ಟೆಂಡರ್ ಫಾರಂದಲ್ಲಿ ಬಿಡ್ ಮೊತ್ತವನ್ನು ಅಂಕಿ ಮತ್ತು ಅಕ್ಷರದಲ್ಲಿ ಎರಡರಲ್ಲಿಯೂ ಸ್ಪಷ್ಟವಾಗಿ ನಮೂದಿಸಿರಬೇಕು. ಏನಾದರೂ ತಿದ್ದುಪಡಿ ಮಾಡಿದ್ದಲ್ಲಿ ಟೆಂಡರ್‌ದಾರರು ತಮ್ಮ ಪೂರ್ಣ ಸಹಿ ಮಾಡಿ ತಿದ್ದುಪಡಿಯನ್ನು ಧೃಡೀಕರಿಸಬೇಕು. ಟೆಂಡರ್ ಫಾರಂಗಳನ್ನು ವರ್ಗಾವಣೆ ಮಾಡಲಾಗುವುದು.
5. ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆ ದಾಖಲುಗೊಳಿಸಿದ ನಂತರ ಸ್ವೀಕೃತವಾದ ಟೆಂಡರ್ ಲಕೋಟೆಗಳನ್ನು ಪೊಲೀಸ್ ಸೂಪರಿಂಟೆಂಡೆಂಟ್, ಚಿಕ್ಕಮಗಳೂರು ಜಿಲ್ಲೆ ರವರಿಗಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿವರಾಗಲಿ ಸಾರ್ವಜನಿಕರ ಸಮ್ಮುಖದಲ್ಲಿ ತೆರೆದು ಬಹಿರಂಗಪಡಿಸುವುದು. ಹರಾಜಿನಲ್ಲಿ ದಾಖಲಾದ ಅತಿ ಹೆಚ್ಚಿನ ಬೆಲೆ ಅಥವಾ ಟೆಂಡರ್‌ನಲ್ಲಿ ದಾಖಲಾದ ಅತಿ ಹೆಚ್ಚಿನ ಬೆಲೆ ಇವೆರಡರಲ್ಲಿ ಅತಿ ಹೆಚ್ಚಿನ ದರ ದಾಖಲಿಸಿದವರನ್ನು ಯಶಸ್ವಿ ಟೆಂಡರ್ ಬಿಡ್‌ದಾರರೆಂದು ಪರಿಗಣಿಸಲಾಗುವುದು.
6. ಯಶಸ್ವಿಯಾದ ಟೆಂಡರ್ / ಬಿಡ್‌ದಾರರು ಅಂಕೀಕೃತ ಹೆಚ್ಚಿನ ಬೆಲೆಯ ಶೇಕಡ 25 ರಷ್ಟು (ಠೇವಣಿ ಬಿಟ್ಟು) ಹಣವನ್ನು ಹರಾಜಿನ ಸ್ಥಳದಲ್ಲಿ ಅದೇ ದಿನವೇ ತುಂಬತಕ್ಕದ್ದು. ಈ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗದು. ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ ಬೆಂಗಳೂರು ರವರಿಂದ ವಿಲೇವಾರಿ ಒಪ್ಪಿಗೆ ಬಂದ ನಂತರವೇ ಉಳಿದ ಹಣವನ್ನು ಬಿಡ್‌ದಾರರಿಂದ ಕಟ್ಟಿಸಿಕೊಂಡು ವಾಹನಗಳನ್ನು ವಹಿಸಿಕೊಡಲಾಗುವುದು.

ಈ ವಾಹನಗಳನ್ನು ಯಶಸ್ವಿ ಬಿಡ್‌ದಾರರು ತಮ್ಮ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗುವುದು. ತಪ್ಪಿದ್ದಲ್ಲಿ ಅವರು ತುಂಬಿದ 25 ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಲಾಗುವುದು. ಹಾಗೂ ಮತ್ತೊಮ್ಮೆ ಹೊಸದಾಗಿ ಅಧಿಸೂಚನೆಯನ್ನು ಹೊರಡಿಸಿ ವಾಹನಗಳನ್ನು ಹರಾಜು ಮಾಡಲಾಗುವುದು.

7. ಯಶಸ್ವಿ ಬಿಡ್‌ದಾರರು ಎಲ್ಲಾ ಹಣವನ್ನು ಪೊಲೀಸ್ ಅಧೀಕ್ಷಕರ ಕಛೇರಿ, ಚಿಕ್ಕಮಗಳೂರು ನಗದು ಶಾಖೆಯಲ್ಲಿ ನಗದಾಗಿ ತುಂಬುವುದು. ನಿರುಪಯುಕ್ತ ವಾಹನಗಳಿಗೆ ಮಾರಾಟ ತೆರಿಗೆಯನ್ನು ಯಶಸ್ವಿ ಬಿಡ್‌ದಾರರಿಂದ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ವಸೂಲಿ ಮಾಡಲಾಗುವುದು.
8. ಹರಾಜಿನಲ್ಲಿ ಭಾಗವಹಿಸುವ ಸಾರ್ವಜನಿಕರು ಇಲಾಖಾ ನಿಯಮಾವಳಿಗಳಿಗೆ ಬದ್ಧರಾಗಿರುತ್ತಾರೆ.
9. ಹರಾಜಿನಲ್ಲಿ ಯಾವುದೇ ಸವಾಲನ್ನು ಯಾವುದೇ ಕಾರಣಕ್ಕಾಗಿ ರದ್ದು ಮಾಡುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ರವರು ಹೊಂದಿರುತ್ತಾರೆ ಹಾಗೂ ಅವರ ತೀರ್ಮಾನವೇ ಅಂತಿಮವಾದದ್ದು.
10. ಬಹಿರಂಗ ಹರಾಜಿನ ವಿಷಯದಲ್ಲಿ ಯಾವುದೇ ವಾದವಿವಾದ ಉಂಟಾದಲ್ಲಿ ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ರವರು ಮಾಡುವ ನಿರ್ಣಯವೇ ಅಂತಿಮವಾಗಿರುತ್ತದೆ.
11. ಹರಾಜಿನಲ್ಲಿ ಯಶಸ್ವಿಯಾಗದೇ ಇರುವಂತಹ ಸವಾಲುದಾರರ ಠೇವಣಿಯನ್ನು ಹರಾಜು ಮುಗಿದ ನಂತರ ತಕ್ಷಣ ಅವರಿಗೆ ಹಿಂದಿರುಗಿಸಲಾಗುವುದು.
12. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ನಿರುಪಯುಕ್ತ ವಾಹನಗಳನ್ನು ಕಛೇರಿಯ ವೇಳೆಯಲ್ಲಿ ಡಿ.ಎ.ಆರ್., ರಾಮನಹಳ್ಳಿ, ಚಿಕ್ಕಮಗಳೂರು ಇಲ್ಲಿ ವೀಕ್ಷಿಸಬಹುದು.
13. ಭರ್ತಿ ಮಾಡಿದ ಟೆಂಡರ್ ಫಾರಂಗಳಲ್ಲಿ ಟೆಂಡರ್‌ದಾರರು ತಮ್ಮ ಸಂಪೂರ್ಣ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸುವುದು.

'ಟೆಂಡರ್ ಫಾರಂನ ನಮೂನೆ'

ನಿರುಪಯುಕ್ತ ಪೋಲೀಸ್ ವಾಹನಗಳ ಹರಾಜು ಟೆಂಡರ್

ಗೆ,

ಪೋಲೀಸ್ ಅಧೀಕ್ಷಕರು,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

ಮಾನ್ಯರೆ,

ತಮ್ಮ ಕಛೇರಿಯ ಟೆಂಡರ್ ಪ್ರಕಟಣೆ ನಂ. ಲೆಕ್ಕ(5)/135/2005–06, ದಿನಾಂಕ: 04/08 ರಲ್ಲಿ ತಿಳಿಸಿರುವ ನಿರುಪಯುಕ್ತವಾದ ವಾಹನಗಳು (ಜೀಪು)

1) ವಾಹನದ ಹೆಸರು & ಸಂಖ್ಯೆ. ರೂ.--------------------ಗಳಿಗೆ ಖರೀದಿಸಲು ಇಚ್ಚಿಸಿರುತ್ತೇನೆ.

ತಮ್ಮ ವಿಶ್ವಾಸಿ
(ಬಿಡ್‌ದಾರರ ಸಹಿ ಮತ್ತು ವಿಳಾಸ)

ದಿನಾಂಕ:
ಸ್ಥಳ:
ಪಿ.ಆರ್. 235

ಪೋಲೀಸ್ ಅಧೀಕ್ಷಕರು,
ಚಿಕ್ಕಮಗಳೂರು ಜಿಲ್ಲೆ.

ಪೋಲೀಸ್ ಅಧೀಕ್ಷಕರವರ ಕಛೇರಿ, ಬೀದರ್

ಟೆಂಡರ್ ಹರಾಜು ಪ್ರಕಟಣೆ

ಸಂಖ್ಯೆ: ಸಂಗ್ರಹ/10/ನಿಸ್ತಂತು/2005–06, ದಿನಾಂಕ: 27ನೇ ಮಾರ್ಚ್ 2008

ವಿಷಯ: ತುಕ್ಕು ಹಿಡಿದು ನಿಷ್ಪ್ರಯೋಜಕವಾಗಿರುವ ಹಳೆಯ ಏರಿಯಲ್ ಗೋಪುರ್/ಕಂಬಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: ಪೋಲೀಸ್ ಅಧೀಕ್ಷಕರು, ವೈರಲೆಸ್ ಬೆಂಗಳೂರು ಇವರ ಪತ್ರ ಸಂಖ್ಯೆ ಸಾಮಾನ್ಯ/7/ಬೀದರ್/05–06 ದಿನಾಂಕ: 16.08.2005.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೀದರ್ ಜಿಲ್ಲೆಯ ಪೋಲೀಸ್ ಠಾಣೆಯಲ್ಲಿರುವ ತುಕ್ಕು ಹಿಡಿದ ನಿರುಪಯುಕ್ತವಾಗಿರುವ ಹಳೆಯ 150 ಅಡಿ ಗಯ ಸಪೋರ್ಟ ಟವರ್–1, 102 ಅಡಿ ಗಯ ಸಪೋರ್ಟ ಟವರ್–1, 60 ಅಡಿ ಗಯ ಸಪೋರ್ಟ ಮಾಸ್ಟ–8 ಮತ್ತು 60 ಅಡಿ ಸೆಲ್ಫ್ ಸಪೋರ್ಟ ಟವರ್–7 ಇವುಗಳನ್ನು ಬಹಿರಂಗ ಹರಾಜು ಮಾಡಲು ಪೋಲೀಸ್ ಅಧೀಕ್ಷಕರು ವೈರ್‌ಲೆಸ್ ಬೆಂಗಳೂರು ರವರು ಉಲ್ಲೇಖಿತ ಪತ್ರದಲ್ಲಿ ಅನುಮತಿ ನೀಡಿದ್ದು, ಸದರಿ ಟೆಂಡರ್ ಕರೆ ಹರಾಜನ್ನು ದಿನಾಂಕ: 28.04.2008 ರಂದು ಬೆಳಿಗ್ಗೆ 11 ಗಂಟೆಗೆ ವಿಲೇವಾರಿ ಮಾಡುವ ಬಗ್ಗೆ ಟೆಂಡರ್ ಕರೆದಿದ್ದು ಆಸಕ್ತಿಯುಳ್ಳವರು ಭಾಗವಹಿಸಲು ತಿಳಿಸಲಾಗಿದೆ. ಸದರಿ ನಿರುಪಯುಕ್ತವಾಗಿರುವ ಟವರ್‌ಗಳ ವಿವರ ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ಠಾಣೆಯ ವಿವರ	ಏರಿಯಲ್ ಟವರ್‌ಗಳ ವಿವರ
1.	ಹುಮನಾಬಾದ್ ಠಾಣೆ	150 ಅಡಿ ಗಯ ಸಪೋರ್ಟ ಟವರ್
2.	ಬೀದರ್ ಜಿಲ್ಲಾ ನಿಸ್ತಂತು	102 ಅಡಿ ಗಯ ಸಪೋರ್ಟ ಟವರ್
3.	ಭಾಲ್ಕಿ ಗ್ರಾಮೀಣ ಠಾಣೆ	60 ಅಡಿ ಗಯ ಸಪೋರ್ಟ ಟವರ್
4.	ಕುಶನೂರು ಠಾಣೆ	–ಡು–
5.	ಔರಾದ ಠಾಣೆ	–ಡು–
6.	ಖಟಕ ಚಿಂಚೋಳ್ಳಿ ಠಾಣೆ	–ಡು–
7.	ಕಮಲನಗರ ಠಾಣೆ	–ಡು–
8.	ಮನ್ನಾಏಖ್ಖೇಳ್ಳಿ ಠಾಣೆ	–ಡು–
9.	ಹುಲಸೂರು ಠಾಣೆ	–ಡು–
10.	ಧನ್ನೂರಾ ಠಾಣೆ	–ಡು–
11.	ಸಂತಪೂರ ಠಾಣೆ	60 ಅಡಿ ಗಯ ಸೆಲ್ಫ್ ಸಪೋರ್ಟ ಟವರ್
12.	ಹಾಲಹಳ್ಳಿ ಠಾಣೆ (ರಿಪೀಟರ್)	–ಡು–
13.	ಚಿಟಗುಪ್ಪಾ ಠಾಣೆ	–ಡು–
14.	ಬಸವಕಲ್ಯಾಣ ನಗರ ಠಾಣೆ	–ಡು–

ಕ್ರ. ಸಂ.	ಠಾಣೆಯ ವಿವರ	ಏರಿಯಲ್ ಟವರ್‌ಗಳ ವಿವರ
15.	ಬೀದರ ನಗರ ಠಾಣೆ	–ಡು–
16.	ಬಗದಲ್ ಠಾಣೆ	–ಡು–
17.	ಮಂಠಾಳ ಠಾಣೆ	–ಡು–

ಸದರಿ ಮೇಲ್ಕಂಡ ನಿರುಪಯುಕ್ತ ಲಾಟ್ ಲೆಕ್ಕದಲ್ಲಿ ಹರಾಜು ಮಾಡಲಾಗುವುದು.

ಹರಾಜಿನ ಷರತ್ತು ಮತ್ತು ನಿಬಂಧನೆಗಳು

1. ನಿರುಪಯುಕ್ತ ಏರಿಯಲ್ ಟವರ್‌ಗಳನ್ನು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ, ಈಗ ಹೇಗೆ ಇದೆಯೋ ಅದೇ ಸ್ಥಿತಿಯಲ್ಲಿ ಅದೇ ಸ್ಥಳದಿಂದ ತೆಗೆದುಕೊಂಡು ಹೋಗುವ ಕರಾರಿನ ಮೇಲೆ ಬಹಿರಂಗ ಹರಾಜು ಮಾಡಲಾಗುವುದು.
2. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಪ್ರತಿಯೊಬ್ಬರು ರೂ. 1000/– (ರೂಪಾಯಿ ಒಂದು ಸಾವಿರ ಮಾತ್ರ) ಠೇವಣಿ ಹಣದ ಮೊತ್ತವನ್ನು ಹರಾಜಿಗೆ ಮುನ್ನ ನಗದಾಗಿ ಪಾವತಿಸತಕ್ಕದ್ದು, ಠೇವಣಿ ಹಣ ಪಾವತಿಸದವರು ಹರಾಜಿನಲ್ಲಿ ಭಾಗವಹಿಸುವಂತಿಲ್ಲ.
3. ಈ ನಿರುಪಯುಕ್ತ ಏರಿಯಲ್ ಟವರ್ ಖರೀದಿಸುವವರು ರೂ. 1000/– (ರೂಪಾಯಿ ಒಂದು ಸಾವಿರ ಮಾತ್ರ) ಠೇವಣಿ ಹಣವನ್ನು ಪೊಲೀಸ್ ಅಧೀಕ್ಷಕರು ಬೀದರ್ ರವರ ಕಛೇರಿಯ ನಗದು ಶಾಖೆಯಲ್ಲಿ ತುಂಬಿ, ನಿರುಪಯುಕ್ತವಾಗಿರುವ ಟವರ್‌ಗಳನ್ನು ಖರೀದಿಗಾಗಿ ಎಂದು ಸ್ಪಷ್ಟವಾಗಿ ನಮೂದಿಸಿ ಪಟ್ಟಿ ಮಾಡಲಾದ ಟೆಂಡರ್‌ಗಳನ್ನು ದಿನಾಂಕ: 25/04/2008 ರಂದು ಮಧ್ಯಾಹ್ನ 3 ಗಂಟೆ ಒಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. (ಟೆಂಡರ್ ಫಾರ್ಮ ನಮೂನೆಯನ್ನು ಈ ಅಧಿಸೂಚನೆಯ ಕೊನೆಯಲ್ಲಿ ಕೊಡಲಾಗಿದೆ.)
4. ಟೆಂಡರ್ ಬಿಡ್ ಮೊತ್ತವನ್ನು ಅಂಕೆ ಮತ್ತು ಅಕ್ಷರದಲ್ಲಿ ಎರಡರಲ್ಲಿಯೂ ಸ್ಪಷ್ಟವಾಗಿ ನಮೂದಿಸಬೇಕು. ಏನಾದರೂ ತಿದ್ದುಪಡಿ ಮಾಡಿದಲ್ಲಿ ಟೆಂಡರ್‌ದಾರರು ತಮ್ಮ ಪೂರ್ಣ ಸಹಿ ಮಾಡಿ ತಿದ್ದುಪಡಿಯನ್ನು ಧೃಢೀಕರಿಸಬೇಕು. ಟೆಂಡರ್ ಫಾರ್ಮಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ.
5. ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಬೆಲೆ ದಾಖಲುಗೊಳಿಸಿ ನಂತರ ಸ್ವೀಕೃತವಾದ ಟೆಂಡರ್ ಲಕೋಟೆಗಳನ್ನು ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿರುವ ಪಿಐ ನಿಸ್ತಂತು (ವೈರ್‌ಲೆಸ್) ರವರಿಗೆ ನೇಮಿಸಲ್ಪಟ್ಟ ಅಧಿಕಾರಿಗಳು ಸಾರ್ವಜನಿಕರ ಸಮ್ಮುಖದಲ್ಲಿ ಕರೆದು ಬಹಿರಂಗ ಹರಾಜುಪಡಿಸುವುದು. ಹರಾಜಿನಲ್ಲಿ ಅತೀ ಹೆಚ್ಚಿನ ಬೆಲೆಯ ಅಥವಾ ಟೆಂಡರ್ ದಾಖಲಿಸಿದ ಅತಿ ಹೆಚ್ಚಿನ ಬೆಲೆ ಇವೆರಡರಲ್ಲಿ ಅತಿ ಹೆಚ್ಚು ದರ ದಾಖಲಿಸಿದವರನ್ನು ಯಶಸ್ವಿ ಟೆಂಡರ್ ಬಿಡ್‌ದಾರರು ಅಂತಾ ಪರಿಗಣಿಸಲಾಗುವುದು.
6. ಯಶಸ್ವಿಯಾದ ಟೆಂಡರ್ ಬಿಡ್‌ದಾರರು ಅಂಗೀಕೃತ ಹೆಚ್ಚಿನ ಬೆಲೆಯ 25% ರಷ್ಟು ಠೇವಣಿಯನ್ನು ಬಿಟ್ಟು ಹಣವನ್ನು ಸ್ಥಳದಲ್ಲಿಯೇ ಅದೇ ದಿನ ತುಂಬತ್ತಕ್ಕದ್ದು. ಈ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲಾ. ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಸಿ.ಓ.ಡಿ/ಟಿ.ಟಿ.ಎಮ್ ಅಥವಾ ಡಿ.ಐ.ಜಿ.ಪಿ ವೈರ್‌ಲೆಸ್ ಬೆಂಗಳೂರು ಇವರಿಂದ ವಿಲೇವಾರಿ ಒಪ್ಪಿಗೆ ಬಂದನಂತರ ಉಳಿದ ಭಾಗವನ್ನು ಬಿಡ್‌ದಾರರಿಂದ ಕಟ್ಟಿಸಿಕೊಂಡು ವೈರ್‌ಲೆಸ್ ಟವರ್‌ಗಳನ್ನು ವಹಿಸಿಕೊಡಲಾಗುವುದು. ಈ ವೈರ್‌ಲೆಸ್ ಟವರ್‌ಗಳನ್ನು ಯಶಸ್ವಿ ಬಿಡ್‌ದಾರರು ತಮ್ಮ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗುವುದು. ತಪ್ಪಿದಲ್ಲಿ ಅವರು ತುಂಬಿದ 25% ರಷ್ಟು ಹಣವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಲಾಗುವುದು. ಹಾಗೂ ಮತ್ತೊಮ್ಮೆ ಹೊಸದಾಗಿ ಅಧಿಸೂಚನೆಯನ್ನು ಹೊರಡಿಸಿ ವೈರ್‌ಲೆಸ್ ಟವರ್‌ಗಳನ್ನು ಹರಾಜು ಮಾಡಲಾಗುವುದು.
7. ಯಶಸ್ವಿ ಬಿಡ್‌ದಾರರು ಎಲ್ಲಾ ಹಣವನ್ನು ಪೊಲೀಸ್ ಅಧೀಕ್ಷಕರು ಬೀದರ್ ಜಿಲ್ಲೆ ರವರ ಕಛೇರಿಯ ನಗದು ಶಾಖೆಯಲ್ಲಿ ತುಂಬತಕ್ಕದ್ದು. ನಿರುಪಯುಕ್ತವಾಗಿರುವ ವೈರ್‌ಲೆಸ್ ಟವರ್‌ಗಳಿಗೆ ಮಾರಾಟ ತೆರಿಗೆಯನ್ನು ಯಶಸ್ವಿ ಬಿಡ್‌ದಾರರಿಂದ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ವಸೂಲಿ ಮಾಡಲಾಗುವುದು.
8. ಹರಾಜಿನಲ್ಲಿ ಭಾಗವಹಿಸುವ ಸಾರ್ವಜನಿಕರು ಇಲಾಖಾ ನಿಯಮಗಳಿಗೆ ಬದ್ಧರಾಗಿರುತ್ತಾರೆ.
9. ಹರಾಜಿನಲ್ಲಿ ಯಾವುದೇ ಸವಾಲುಗಳನ್ನು ಯಾವುದೇ ಕಾರಣಕ್ಕಾಗಿ ರದ್ದುಮಾಡುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಅಧೀಕ್ಷಕರು ಬೀದರ್ ರವರು ಹೊಂದಿರುತ್ತಾರೆ. ಹಾಗೂ ಅವರ ತೀರ್ಮಾನವೇ ಅಂತಿಮವಾಗಿರುವುದು.
10. ಬಹಿರಂಗ ಹರಾಜಿನ ವಿಷಯದಲ್ಲಿ ವಿವಾದ ಉಂಟಾದಲ್ಲಿ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಸಿ.ಓ.ಡಿ/ಟಿ.ಟಿ.ಎಮ್ ಅಥವಾ ಡಿ.ಐ.ಜಿ.ಪಿ. ವೈರ್‌ಲೆಸ್ ಬೆಂಗಳೂರು ಇವರು ಮಾಡುವ ನಿರ್ಣಯವೇ ಅಂತಿಮವಾಗಿರುತ್ತದೆ.
11. ಹರಾಜಿನಲ್ಲಿ ಯಶಸ್ವಿಯಾಗದೇ ಇರುವಂತಹ ಸವಾಲುದಾರರ ಠೇವಣಿ ಹಣವನ್ನು ಹರಾಜು ಮುಗಿದ ನಂತರ ಅವರಿಗೆ ಹಿಂತಿರುಗಿಸಲಾಗುವುದು.

12. ಹರಾಜುದಾರರು ಭಾಗವಹಿಸಲು ಇಚ್ಛಿಸುವವರು ನಿರುಪಯುಕ್ತ ಟವರ್‌ಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ವೀಕ್ಷಿಸಬಹುದು.
13. ಭರ್ತಿ ಮಾಡಿದ ಟೆಂಡರ್ ಫಾರ್ಮಗಳಲ್ಲಿ ಟೆಂಡರ್‌ದಾರರು ತಮ್ಮ ಸಂಪೂರ್ಣ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸುವುದು.

ಪೊಲೀಸ್ ಅಧೀಕ್ಷಕರು,
ಪಿ.ಆರ್. 238 ಬೀದರ್.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು
ಇ – ಟೆಂಡರ್ ಸಮಯಾವಧಿ ವಿಸ್ತರಣೆ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
ಕೆಪಿಡಬ್ಲ್ಯೂಡಿ:2007–08:ವರ್ಕ್–ಇಂಡೆಂಟ್ 4, ದಿನಾಂಕ: 31ನೇ ಮಾರ್ಚ್ 2008

ದಿನಾಂಕ: 25.3.2008ರ "ವಿಜಯಕರ್ನಾಟಕ" ಹಾಗೂ ದಿನಾಂಕ: 26.03.2008ರ "ದಿ ಟೈಮ್ಸ್ ಆಫ್ ಇಂಡಿಯಾ" ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಚೇರಿಯ ಟೆಂಡರು ನೋಟೀಫಿಕೇಶನ್ ನಂ.8:ಜಿಎನ್‌ಎಲ್:ಟಿಎನ್‌ಡಿ:2007–08:ಜೆಇ–2 ದಿನಾಂಕ:20.03.2008ರ ಪ್ರಕಟಣೆಯಲ್ಲಿ ಸೂಚಿಸಿರುವ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಕಡಬ ಸುಬ್ರಹ್ಮಣ್ಯ ಬಿಸಿಲೆ ರಸ್ತೆಯ (ರಾಜ್ಯ ಹೆದ್ದಾರಿ – 113) ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಆಹ್ವಾನಿಸಲಾದ ಟೆಂಡರು ಪ್ರಕಟಣೆಗೆ ಸಮಯಾವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಮಾರ್ಪಾಡು ಮಾಡಲಾಗಿದೆ.

ಕಾಮಗಾರಿಯ ಟೆಂಡರನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಇದರಲ್ಲಿ ಪ್ರಕಟಿಸಲಾಗಿದೆ. ದಯಮಾಡಿ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನೋಡಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾಗಿ ಕೋರಲಾಗಿದೆ. ಟೆಂಡರು ಸ್ವೀಕರಿಸುವ ದಿನಾಂಕವನ್ನು 26.4.2008 ರಂದು ಅಪರಾಹ್ನ 4.00 ಗಂಟೆಯವರೆಗೆ ಎಂದು ನಿಗದಿಪಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು Govt help desk ಮೂಲಕ ಸಹ ತಿಳಿದುಕೊಳ್ಳಬಹುದು. ದೂರವಾಣಿ ಕರೆ:080 22485867.

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ.

ಕಾರ್ಯನಿರ್ವಾಹಕ ಇಂಜಿನಿಯರ್,
ಪಿ.ಆರ್. 242 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ
ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ
ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು–560 001
ಪತ್ರಿಕಾ ಪ್ರಕಟಣೆ
ಕ್ರಮ ಸಂಖ್ಯೆ: ಕರಾಆ:ಆರ್ಥಿಕ:14:2005–06 (ಭಾಗ), ದಿನಾಂಕ: 29ನೇ ಮಾರ್ಚ್ 2008

ಭಾರತ ಸರ್ಕಾರದ Intigratted Project on Consumer Protection ಎಂಬ ಯೋಜನೆಯಡಿಯಲ್ಲಿ ಕಛೇರಿ ಸಲಕರಣೆಗಳು, ಕಛೇರಿ ಪೀಠೋಪಕರಣಗಳು ಮತ್ತು ಗಣಕೀಕರಣಕ್ಕೆ ಸಂಬಂಧಿಸಿದಂತೆ ಸಾಮಗ್ರಿಗಳನ್ನು ಖರೀದಿ ಮಾಡುವ ಬಗ್ಗೆ ವಿದ್ಯುನ್ಮಾನ ಮಾದ್ಯಮದಲ್ಲಿ ಪ್ರಕಟಣೆಯನ್ನು ವೆಬ್ ಸೈಟ್ ವಿಳಾಸ http://kscdrc.kar.nic.in ರಲ್ಲಿ ಪ್ರಕಟಿಸಿದ್ದು, ಆಸಕ್ತಿ ಉಳ್ಳವರು ಮಾಹಿತಿಯನ್ನು ವೆಬ್‌ಸೈಟ್‌ನಿಂದ ಪಡೆದು, ದರಪಟ್ಟಿಯನ್ನು ಸೀಲ್ ಮಾಡಿದ ಲಕೋಟೆಯಲ್ಲಿರಿಸಿ ದಿನಾಂಕ:30.04.2008ರ ಸಂಜೆ 4:00 ಗಂಟೆಯೊಳಗಾಗಿ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಲು ಕೋರಿದೆ.

ನ್ಯಾಯಮೂರ್ತಿ ಚಂದ್ರಶೇಖರಯ್ಯ
ಪಿ.ಆರ್. 243 ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ,
ಬೆಂಗಳೂರು.

ಲೋಕೋಪಯೋಗಿ ಇಲಾಖೆ
(ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕೋಲಾರ ವಿಭಾಗ, ಕೋಲಾರ
ಬಾಬುವಾರು ದರದ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 41–7/2007–08/ ದಿನಾಂಕ: 22ನೇ ಮಾರ್ಚ್ 2008
ಸಂಖ್ಯೆ:ಕಾಇಂ./ಲೋ.ಇ/ಕೋ.ವಿ:ತಾಂತ್ರಿಕ ಶಾಖೆ/ಟೆಂಡರ್/ಮುಂದೂಡಿಕೆ/07–08/

ಉಲ್ಲೇಖ: 1 ಈ ಕಛೇರಿಯ ಬಾಬುವಾರು ದರದ ಟೆಂಡರ್ ಅಧಿಸೂಚನಾ ಸಂಖ್ಯೆ: 41 : 2007–08 ದಿ: 22.10.2007.

2. ಈ ಕಛೇರಿಯ ಬಾಬುವಾರು ದರದ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 41–1/2007–08/ ದಿನಾಂಕ: 03.12.2007.
3. ಈ ಕಛೇರಿಯ ಬಾಬುವಾರು ದರದ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 41–2/2007–08/ ದಿನಾಂಕ: 23.12.2007.
4. ಈ ಕಛೇರಿಯ ಬಾಬುವಾರು ದರದ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 41–3/2007–08/ ದಿನಾಂಕ: 21.01.2008.
5. ಈ ಕಛೇರಿಯ ಬಾಬುವಾರು ದರದ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 41–4/2007–08/ ದಿನಾಂಕ: 30.01.2008.
6. ಈ ಕಛೇರಿಯ ಬಾಬುವಾರು ದರದ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 41–5/2007–08/ ದಿನಾಂಕ: 16.02.08.
7. ಈ ಕಛೇರಿಯ ಬಾಬುವಾರು ದರದ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 41–6/2007–08/ ದಿನಾಂಕ: 21.02.08.

ಉಲ್ಲೇಖದ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ ಆಹ್ವಾನಿಸಿರುವ ಈ ಕೆಳಕಂಡ ಕಾಮಗಾರಿಗೆ ಖಾಲಿ ಟೆಂಡರ್ ಫಾರಂಗಳನ್ನು ನೀಡುವ ಹಾಗೂ ಸ್ವೀಕೃತಿ ದಿನಾಂಕಗಳನ್ನು ಈ ಕೆಳಕಂಡಂತೆ ಮುಂದೂಡಲಾಗಿದೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ ರೂ ಲಕ್ಷಗಳಲ್ಲಿ
1	ಕೋಲಾರ ಜಿಲ್ಲೆ, ಮಾಲೂರಿನಲ್ಲಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.	49.90

1) ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ: 30.04.2008 ಸಂಜೆ 5.30 ಗಂಟೆಯವರೆಗೆ

2) ಟೆಂಡರ್‌ಗಳನ್ನು ಸ್ವೀಕರಿಸುವ ಕಡೆಯ ದಿನಾಂಕ 02.05.2008 ರಂದು ಸಂಜೆ 4.00 ಗಂಟೆಯವರೆಗೆ, ಸ್ವೀಕರಿಸಲಾಗುವುದು.

3) ಟೆಂಡರ್‌ಗಳನ್ನು ದಿನಾಂಕ: 02.05.2008 ರಂದು ಸಂಜೆ 4.30 ಗಂಟೆಗೆ ಸಾಧ್ಯವಾದರೆ ತೆರೆಯಲಾಗುವುದು.

ಉಳಿದಂತೆ ಯಾವುದೇ ನಿಬಂಧನೆಗಳಲ್ಲಿ ಹಾಗೂ ನಿಯಮಾವಳಿಗಳಲ್ಲಿ ಬದಲಾವಣೆ ಇರುವುದಿಲ್ಲ, ಹೆಚ್ಚಿನ ವಿವರಗಳನ್ನು ವಿಭಾಗ ಕಛೇರಿಯಲ್ಲಿ ಎಲ್ಲಾ ಕೆಲಸಗಳ ದಿನದಂದು ಕೆಲಸದ ವೇಳೆಯಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜಿನೀಯರ್,
ಪಿ.ಆರ್. 232 ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಕೋಲಾರ ವಿಭಾಗ, ಕೋಲಾರ.

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ

ಶ್ರೀ ಡಿ ದೇವರಾಜ ಅರಸು ಬಡಾವಣೆ, 'ಎ'' ಬ್ಲಾಕ್, ಪಿ.ಬಿ. ರಸ್ತೆ, ದಾವಣಗೆರೆ–577006

"ಟೆಂಡರ್ ಪ್ರಕಟಣೆ (ಎರಡು ಲಕೋಟೆ ಬಿಡ್ ಪದ್ಧತಿ)"

ನಂ:ದಾನಪ್ರಾ:ತಾಶಾ:02:ಟೆಂಪ್ರ:02:2007–08, ದಿನಾಂಕ: 27ನೇ ಮಾರ್ಚ್ 2008

ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀ ಡಿ. ದೇವರಾಜ್ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ ಇವರು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆ ಗುತ್ತಿಗೆದಾರರುಗಳಿಂದ ಈ ಕೆಳಗೆ ನಮೂದಿಸಿರುವ ಕಾಮಗಾರಿಗೆ ಮೊಹರಾದ ಐಟಂವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ (ಒಂದು ಲಕೋಟೆ ತಾಂತ್ರಿಕ ಬಿಡ್ ಮತ್ತು ಎರಡನೇ ಲಕೋಟೆ ಫೈನಾನ್ಸಿಯಲ್ ಬಿಡ್ ಇರುತದೆ).

1. ಟೆಂಡರ್ ಫಾರಂಗೆ ಅರ್ಜಿ ನೀಡಲು (ನಿಗಧಿತ ಟೆಂಡರ್ ಫಾರಂ ಬೆಲೆಯೊಂದಿಗೆ) ಕೊನೆಯ ದಿನಾಂಕ:29.05.2008 ರ ಸಂಜೆ 4.00 ಗಂಟೆವರೆಗೆ)

2. ಖಾಲಿ ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ:02.06.2008ರ ಸಂಜೆ 4.00 ಗಂಟೆವರೆಗೆ

3. ಬಿಡ್ ಪೂರ್ವ ಮಿಟಿಂಗ್ ದಿನಾಂಕ:05.06.2008 ರಂದು ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಸಹಾಯಕ ಕಾರ್ಯಪಾಲಕ ಅಭಿಯಂತರರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರ ಕೊಠಡಿಯಲ್ಲಿ.

4. ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ದಿನಾಂಕ:09.06.2008 ರ ಸಂಜೆ 4.00 ಗಂಟೆವರೆಗೆ

5. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.06.2008 ರ ಸಂಜೆ 4.30 ಗಂಟೆ

6. ಅರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಗೊಂಡ ಗುತ್ತಿಗೆದಾರರಿಗೆ ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ಮುಂದೆ ತಿಳಿಸಲಾಗುವುದು.

ಟೆಂಡರ್ ಫಾರಂ ಬೆಲೆಯನ್ನು (ಹಿಂದಿರುಗಿಸುವುದಿಲ್ಲ) ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರಿಗೆ ಪಾವತಿಯಾಗುವಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಅರ್ಜಿಯ ಜೊತೆಗೆ ಲಗತ್ತಿಸತಕ್ಕದ್ದು, ಮೊಹರು ಮಾಡಿದ ಟೆಂಡರುಗಳ ಲಕೋಟೆಯ ಮೇಲೆ ಕಾಮಗಾರಿಯ ಹೆಸರನ್ನು ಬರೆದಿರಬೇಕು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟಿರುವ ಟೆಂಡರ್ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ರೂ.ಗಳಲ್ಲಿ	ಟೆಂಡರ್ ಪತ್ರದ ಬೆಲೆ ರೂ.ಗಳಲ್ಲಿ	ಕೆಲಸ ಪೂರ್ಣ ಗೊಳಿಸುವ ಕಾಲಮಿತಿ	ಗುತ್ತಿಗೆದಾರರ ದರ್ಜೆ
1	ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಿರುವ ಶ್ರೀ ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ ಬರುವ ರಸ್ತೆಗಳಿಗೆ ಮೆಟ್ಲಿಂಗ್ ರಸ್ತೆ ಮತ್ತು ಡಾಂಬರೀಕರಣ ಮಾಡುವುದು.	3,05,62071–00	305620–00	30,500–00 + ತೆರಿಗೆ	12 ತಿಂಗಳು (ಮಳೆಗಾಲ ಸೇರಿ)	1 ದರ್ಜೆ & ಮೇಲ್ಪಟ್ಟು
2	ಶ್ರೀ ಜೆ.ಹೆಚ್. ಪಟೇಲ್ ಬಡಾವಣೆಯ ಪ್ರದೇಶದಲ್ಲಿ ಬರುವ ರಸ್ತೆಗಳಿಗೆ ಸರ್ಫೇಸ್ ಡ್ರೈನ್ ಸಂಬಂಧ ಸಿಮೆಂಟ್ ಕಾಂಕ್ರೀಟ್ ಡ್ರೈನ್ ನಿರ್ಮಾಣ ಮಾಡುವುದು.	50739422–00	507394–00	50,500–00 + ತೆರಿಗೆ	6 ತಿಂಗಳು (ಮಳೆಗಾಲ ಸೇರಿ)	1 ದರ್ಜೆ & ಮೇಲ್ಪಟ್ಟು

ಷರತ್ತುಗಳು:

1. ಅರ್ಜಿಯೊಂದಿಗೆ ಲೈಸನ್ಸ್, ಕಾಮಗಾರಿ ನೆರವೇರಿಸಿರುವ ದೃಢೀಕರಣ ಪತ್ರ, ಆದಾಯ ತಿರುವಳಿ, ಇತರೇ ದಾಖಲೆ ಪತ್ರಗಳನ್ನು ಲಗತ್ತಿಸತಕ್ಕದ್ದು.
2. ಇ.ಎಂ.ಡಿ. ಮೊಬಲಗನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಡೆದ ಡಿಡಿ ರೂಪದಲ್ಲಿ ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರ ಹೆಸರಿಗೆ ತೆಗೆದು ತಾಂತ್ರಿಕ ಬಿಡ್ ಲಕೋಟೆಯಲ್ಲಿ ಲಗತ್ತಿಸತಕ್ಕದ್ದು.ಇ.ಎಂ.ಡಿ ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
3. ಪ್ರತಿಯೊಬ್ಬ ಗುತ್ತಿಗೆದಾರರು ಟೆಂಡರ್‌ಗೆ ಕರೆದ ಕಾಮಗಾರಿಯಂತಹ ಕಾಮಗಾರಿಗಳನ್ನು ದಕ್ಷತೆಯಿಂದ ನಿರ್ವಹಿಸಿದ ಅನುಭವ ಇರಬೇಕು. ಪ್ರತಿ ಕಾಮಗಾರಿಗೆ ನಿರ್ಧಿಷ್ಟಪಡಿಸಿದ ಮೊತ್ತದ ಶೇಕಡ 90 ಕ್ಕಿಂತ ಕಡಿಮೆ ಇಲ್ಲದ ಮೊತ್ತದ ಒಂದು ಕಾಮಗಾರಿಯನ್ನು ಗುತ್ತಿಗೆದಾರರು ಹಿಂದಿನ ಐದು (2002–03 ರಿಂದ 2006–07) ಆರ್ಥಿಕ ವರ್ಷಗಳ ಬ್ಲಾಕ್ ಅವಧಿಯಲ್ಲಿ ಯಾವುದೇ ಒಂದು ಆರ್ಥಿಕ ವರ್ಷದಲ್ಲಿ ತೃಪ್ತಿಕರವಾಗಿ ಪೂರೈಸಿರಬೇಕು. ಕೆಲಸ ನಿರ್ವಹಿಸಿದ ಬಗ್ಗೆ ಕಾರ್ಯ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ತಾಂತ್ರಿಕ ಬಿಡ್‌ನೊಂದಿಗೆ ಪ್ರತ್ಯೇಕವಾಗಿ ತಪ್ಪದೇ ಲಗ್ಗತ್ತಿಸಬೇಕು.
4. ಕಳೆದ ಐದು ವರ್ಷಗಳ ಅವಧಿಯಲ್ಲಿ ಗುತ್ತಿಗೆದಾರರ ಆರ್ಥಿಕ ವಹಿವಾಟು ಮೇಲ್ಕಂಡ ಕಾಮಗಾರಿಗಳಿಗೆ ಇಟ್ಟಿರುವ ಟೆಂಡರ್ ಮೊತ್ತದ ಕನಿಷ್ಠ ಎರಡರಷ್ಟಿರಬೇಕು. ಕೆಲಸ ನಿರ್ವಹಿಸಿದ ಬಗ್ಗೆ ಕಾರ್ಯ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ತಾಂತ್ರಿಕ ಬಿಡ್‌ನೊಂದಿಗೆ ಪ್ರತ್ಯೇಕವಾಗಿ ತಪ್ಪದೇ ಲಗ್ಗತ್ತಿಸಬೇಕು.
5. ಮೇಲೆ ತೋರಿಸಿರುವ ಯಾವುದೇ ದಿನಾಂಕದಂದು ರಜೆ ಇದ್ದಲ್ಲಿ ಮುಂದಿನ ಕಛೇರಿ ಕೆಲಸದ ದಿನಗಳನ್ನು ಪರಿಗಣಿಸತಕ್ಕದ್ದು.
6. ಯಾವುದೇ ಕಾರಣ ನೀಡದೆ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿರುತ್ತದೆ.
7. ಮುಂದೆ ಬದಲಾಗಬಹುದಾದ ನಿಯಮಗಳಿಗೆ ಹಾಗೂ ಹೆಚ್ಚಿನ ಷರತ್ತುಗಳಿಗೆ ಬದ್ದರಾಗಿರತಕ್ಕದ್ದು ಹಾಗೂ ಹೆಚ್ಚಿನ ನಿಬಂಧನೆಗಳನ್ನು ಕೆಲಸದ ದಿನಗಳಲ್ಲಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಆಯುಕ್ತರು
ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ,
ದಾವಣಗೆರೆ.

ಪಿ.ಡಿ. 32

KARNATAKA STATE BOARD OF WAKFS

"DARUL AWKAF", No. 6, Cunningham Road, Bangalore-52

CORRIGENDUM

No. KTW/MSC/7/BNU/2007-08, Dated: 12th March 2008

Sub: Correction of Gazette Notification in respect of Mosque at Attibele, Anekal Taluk, Bangalore (Urban) Dist.

Preamble:

WHEREAS, the Mosque at Attibele is a Wakf institution notified at Serial No. 309 in Mysore Gazette dated 08.02.1968. The said institution is having landed property measuring 55' x 35' in Survey No. 392. The Wakf Officer, Dist.Wakf Advisory Committee, Bangalore (Urban) vide his letter No.DWAC/ADM/8/07-08, dated 19.02.2008 has reported that as per Gift Deed and latest Encumbrance issued by the Sub-Registrar, Anekal, the area is 100' x 100', but as per Survey report and Gazette Notification it was wrongly mentioned as 55' x 35'. Therefore, he is requesting to issue corrigendum and also to publish in the official Gazette. Hence, this Corrigendum.

In view of the facts stated in the preamble, the following Corrigendum is hereby issued.

THE EXISTING ENTRIES		READ THE CORRECTED ENTRIES	
Sl.No. 309	Mosque, Sunni, Attibele, Anekal Taluk, Bangalore K.No.304, 305 55' x 35'	Sl.No.309.	Mosque, Sunni, Attibele, Anekal Taluk, Bangalore (Urban) District. Survey No.392, Measuring 100' x 100' **BOUNDARIES:** North: Sri Samiulla House & Sri Narayana Rao's House (belongs to Sy.No.391) East: Rest of land in Sy.No.392 South: Rest of land in Sy.No.392, and, West: Road to Anekal

Addl. Chief Executive Officer,
Karnataka State Board of Wakfs, B'lore.

P.D. 33

KARNATAKA STATE BOARD OF WAKFS

[Constituted by the Government of Karnataka under the Wakf Act, 1995 (CENTRAL ACT-43 OF 95)

Darul Awkaf, No. 6, Cunningham Road, Bangalore-560052

No. KBW/M-1/3/BNU/91-92, Dated: 31st March 2008

CORRIGENDUM

Sub: Correction of entries in Gazette Sl.No.281,284 and 286 vide Notification No.MBW 19(1) 64 dated 7.6.1965 published in official Gazette on 22.7.1965 of Bangalore Urban District.

Ref: Application No. HSSD/HMSD/5/07-08 dated: 29.1.2008 of Secretary of the Wakf.

Preamble:

The Ashurkhana, Hazrath Syed Ibrahim Shah Khadri alias Suteshah Makan in the premises of Dargah Hazrath Suteshah, Sunni, Bangalore and Hazrath Manick Shah Dargah, Sunni, Avenue Road, Bangalore, are Gazette Notified Wakf Institutions notified at Sl.No. 281, 284 and 286 vide Notification No. MBW 19 (1) 64 dated 7.6.1965 published in official Gazette on 22.7.1965, the Secretary of the Wakf vide his letter referred at reference (1) above has reported that the name of the Muthawalli of the said institutions have not been correct in the said official Gazette and requested to incorporating the above particulars and issue corrigendum in this behalf. Hence, this corrigendum.

	Existing entries			Read the correct entries			
Sl.No. of Gazette	Name of Wakf	Description	Name of Muthawalli	Sl.No. of Gazette	Name of Wakf	Description	Name of Muthawalli
281	Ashurkhana in the premises of Dargah Hazrath Sute Shah Sunni A.S.C. Street Cross, Bangalore	Stone Building 21' x 10'	Convenor	281	Ashurkhana in the premises of Dargah Hazrath Sute Shah Sunni A.S.C. Street, Bangalore	Stone Building 21' x 10'	President Managing Committee
284	Hazrath Syed Ibrahim Shah Khadri alias Suteshah Makan, Sunni, Police Road, Bangalore	255+273/2x 114+175/2	L.Ahmedulla Khan. M.A.LL.B.	284	Hazrath Syed Ibrahim Shah Khadri @ Suteshah Makan, Sunni, Police Road, Bangalore	255+273/2x 141+175/2	President Managing Committee
286	Hazrath Manick Shah Dargah Sunni, Avenue Road Bangalore	Sl.No.14,15 A34-18G. Sl.No. 22 A138-00G. Doddagola-halli Bhoopa-sandra A196-18G Ballahalli A602-29G	Committee consisting of Mujawar	286	Hazrath Manick Shah Dargah Sunni, Avenue Road, Bangalore.	a) Sl.No.14, 15 A34-18G b)Sl.No.22.A 138-00G c)Dodda-golahalli Bhoopa-sandra A196-18G d) Ballahalli Total Measure-ment A602-29G	President Managing Committee

Chief Executive Officer,
Karnataka State Board of Wakfs, B'lore.

P.D. 34

ಶಿಕ್ಷಣ ಇಲಾಖೆ

ನಮೂನೆ–1

9ನೇ ನಿಯಮ ನೋಡಿ

ಅಧಿಸೂಚನೆ

ಶ್ರೀ:ಶ್ರೀಮತಿ **ಚೆಲ್ಲಮ್ಮ ಕೆ** ಇವರು ಸಹ ಶಿಕ್ಷಕಿಯಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಲೆಮಡಲು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು **ಶೈಲ ಕೆ.** ಎಂದು ಬದಲಾಯಿಸಿ ಕೊಳ್ಳಲು ಅನುಮತಿ ನೀಡಲಾಗಿದೆ.

ನೇಮಕಾಧಿಕಾರಿಯವರ ಸಹಿ ಮತ್ತು
ಪದನಾಮ

ಪಿ.ಡಿ. 26

ಪೊಲೀಸ್ ಇಲಾಖೆ

ಪೊಲೀಸ್ ಕಮಿಷನರವರ ಕಾರ್ಯಾಲಯ, ಹುಬ್ಬಳ್ಳಿ – ಧಾರವಾಡ

ನಮೂನೆ–1

9ನೇ ನಿಯಮ ನೋಡಿ

ಅಧಿಸೂಚನೆ

ಶ್ರೀ/ಶ್ರೀಮತಿ **ಹನುಮಂತಪ್ಪ ಬಸಪ್ಪ ಮಾದರ** ಇವರು CPC-2235 ಆಗಿ ಧಾರವಾಡ ವಿದ್ಯಾಗಿರಿ ಪೊಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು **ಹನುಮಂತಪ್ಪ ಬಸಪ್ಪ ದೊಡ್ಡಮನಿ** ಎಂದು ಬದಲಾವಣೆಗೆ ಅನುಮತಿ ನೀಡಲಾಗಿದೆ.

ನೇಮಕಾಧಿಕಾರಿಯವರ ಸಹಿ ಮತ್ತು
ಪದನಾಮ

ಪಿ.ಡಿ. 30

ಪೊಲೀಸ್ ಇಲಾಖೆ
ಡೈರೆಕ್ಟರ್ ಜನರಲ್ ಮತ್ತು ಇನ್ಸ್ ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು – 560 001
ಟೆಂಡರ್ ಪ್ರಕಟಣೆ
ಸಂಖ್ಯೆ: ಸಂಗ್ರಹ–2(2)62/2006–07, ದಿನಾಂಕ: 31ನೇ ಮಾರ್ಚ್ 2008

ಪೊಲೀಸ್ ಪ್ರಧಾನ ಕಛೇರಿಯಲ್ಲಿರುವ ಗಣಕ ಯಂತ್ರ ಮತ್ತು ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಬಗ್ಗೆ ಬಿಡಿಭಾಗಗಳೊಂದಿಗೆ (with spares) ಮೊಹರು ಮಾಡಿರುವ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಗಣಕ ಯಂತ್ರಗಳ ಮಾದರಿ	ಸಂಖ್ಯೆ
1.	ಪೆಂಟಿಯಂ–3	10
2.	ಪೆಂಟಿಯಂ–4	64
	ಒಟ್ಟು	**74**

ಕ್ರಮ ಸಂಖ್ಯೆ	ಪ್ರಿಂಟರ್‌ಗಳ ಮಾದರಿ	ಸಂಖ್ಯೆ
1.	ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್	59
2.	ಹೆಚ್.ಪಿ. ಡೆಸ್ಕ್ ಜೆಟ್ / ಇಂಕ್ ಜೆಟ್ ಪ್ರಿಂಟರ್	09
3.	ಹೆಚ್.ಪಿ. ಲೇಸರ್ ಜೆಟ್ ಪ್ರಿಂಟರ್	25
4.	ಹೆಚ್.ಪಿ. ನೆಟ್‌ವರ್ಕ್ ಪ್ರಿಂಟರ್ 4300	05
5.	ಕೋನಿಕಾ ಪ್ರಿಂಟರ್ – 1350	20
	ಒಟ್ಟು	**118**

ಸೂಚನೆ: ತಯಾರಿಕಾ ಘಟಕ/ರೆಪ್ಯೂಟೆಡ್ ಏಜೆಂಟ್ ಮತ್ತು ರೆಪ್ಯೂಟೆಡ್ ಕಂಪನಿಗಳಿಗೆ ಆದ್ಯತೆ ನೀಡಲಾಗುವುದು.

ಟೆಂಡರ್ ಅರ್ಜಿಗಳನ್ನು ದಿನಾಂಕ 08.04.2008 ರಿಂದ 07.05.2008 ರವರೆಗೆ ಕೆಲಸದ ದಿನದಂದು ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯೊಳಗೆ ಈ ಕಛೇರಿಯಲ್ಲಿ ಪಡೆಯಬಹುದು. ಪ್ರತಿ ಟೆಂಡರ್ ಅರ್ಜಿ ನಮೂನೆಯ ಬೆಲೆ ರೂ.1,000/–ಗಳನ್ನು ನಗದು ಅಥವಾ ಡಿ.ಡಿ. ಮೂಲಕ ಮಾತ್ರ ಪಾವತಿಸಬಹುದಾಗಿದೆ. (ಮನಿಯಾರ್ಡರ್‌ನಲ್ಲಿ ಪಾವತಿಸಿದರೆ ತಿರಸ್ಕರಿಸಲಾಗುವುದು) ಟೆಂಡರ್ ಅರ್ಜಿಯನ್ನು ಅಂಚೆ ಮೂಲಕ ಪಡೆಯಲು ಇಚ್ಛಿಸುವವರು ರೂ.1,000/–ಗಳಿಗೆ ಡಿ.ಡಿ.ಯನ್ನು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು ರವರ ಹೆಸರಿನಲ್ಲಿ ಪಡೆದು ಸ್ವವಿಳಾಸ ಹೊಂದಿದ ಲಕೋಟೆಯ ಮೇಲೆ ರೂ.50/–ಗಳ ಅಂಚೆ ಚೀಟಿಯನ್ನು ಲಗತ್ತಿಸಿ ಕಳುಹಿಸಲು ಕೋರಿದೆ.

ಭರ್ತಿ ಮಾಡಿದ ಟೆಂಡರ್ ಅರ್ಜಿ ನಮೂನೆಗಳನ್ನು ಹಾಗೂ ಪ್ರತಿ ಉಪಕರಣದ ಮೌಲ್ಯಕ್ಕೆ ಶೇಕಡ 2ರಷ್ಟು ಇ.ಎಂ.ಡಿ.ಯನ್ನು ಠೇವಣಿಯಾಗಿ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ರವರ ಹೆಸರಿನಲ್ಲಿ ಪಡೆದ ಡಿ.ಡಿ., ಸಂಸ್ಥೆಯ ಆರ್ಥಿಕ ಸ್ಥಾನಮಾನ ಮತ್ತು ಸಾಮರ್ಥ್ಯ ಪೂರ್ವರ್ಹತೆ, ಮಾರಾಟ ತೆರಿಗೆ, ಆದಾಯ ತೆರಿಗೆ ವಿವರಗಳು, ವಾರ್ಷಿಕ ವಹಿವಾಟು ಮತ್ತು ಇತರೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಮೊಹರು ಮಾಡಿದ ಕವರಿನಲ್ಲಿ ಈ ಕಛೇರಿಯ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಕೇಂದ್ರಸ್ಥಾನ–1) ರವರಿಗೆ ಹೆಸರಿಸಿ, ದಿನಾಂಕ 07.05.2008 ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಈ ದಿನಾಂಕದ ನಂತರದ ಟೆಂಡರ್‌ಗಳನ್ನು ಅಂಗೀಕರಿಸಲಾಗುವುದಿಲ್ಲ. ಮೊಹರು ಮಾಡಿದ ಲಕೋಟೆಯ ತುದಿಯಲ್ಲಿ "ಪೊಲೀಸ್ ಪ್ರಧಾನ ಕಛೇರಿಯ ಗಣಕ ಯಂತ್ರ ಮತ್ತು ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಬಗ್ಗೆ" ಅರ್ಜಿ ಎಂದು ನಮೂದಿಸಿರಬೇಕು ಹಾಗೂ ಲಕೋಟೆಯ ಸರಬರಾಜು ಮಾಡಲು ಬಯಸುವ ಸಂಸ್ಥೆಯ ವಿಳಾಸವನ್ನು ಒಳಗೊಂಡಿರಬೇಕು. ಸ್ವೀಕರಿಸಿದ ಟೆಂಡರ್‌ಗಳನ್ನು ದಿನಾಂಕ 09.05.2008 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ತೆರೆಯಲಾಗುವುದು. ಇಚ್ಛೆಯುಳ್ಳ ಟೆಂಡರ್‌ದಾರರು ಟೆಂಡರ್‌ಗಳನ್ನು ತೆರೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು.

ವಾರ್ಷಿಕ ನಿರ್ವಹಣಾ ಮೌಲ್ಯಕ್ಕೆ ಇ.ಎಂ.ಡಿ.ಯನ್ನು ಡಿ.ಡಿ. ಮೂಲಕ ಪಾವತಿಸದಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಟೆಂಡರ್‌ದಾರರು ಅಂಚೆ ಮೂಲಕ / ಕೊರಿಯರ್ ಮೂಲಕ ಕಳುಹಿಸುವ ಟೆಂಡರ್ ಅರ್ಜಿ ಮತ್ತು ದಾಖಲಾತಿಗಳು ತಡವಾಗಿ ತಲುಪಿದಲ್ಲಿ / ನಾಶವಾದಲ್ಲಿ ಇಲಾಖೆಯು ಜವಾಬ್ದಾರಿಯಲ್ಲ. ಇಲಾಖೆಯು ಯಾವುದೇ ಕಾರಣವನ್ನು ನೀಡದೆ ಸಾರಾಸಗಟಾಗಿ / ಭಾಗಶಃ ಒಪ್ಪಿಕೊಳ್ಳುವ, ಹೆಚ್ಚು ಮತ್ತು ಕಡಿಮೆ ಮಾಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.

ಡೈರೆಕ್ಟರ್ ಜನರಲ್ ಮತ್ತು ಇನ್ಸ್ ಪೆಕ್ಟರ್
ಜನರಲ್ ಆಫ್ ಪೊಲೀಸ್‌ರವರ ಪರವಾಗಿ

ಪಿ.ಆರ್. 221

ಶಿಕ್ಷಣ ಇಲಾಖೆ
ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ, ವಿಜಾಪೂರ
ನಮೂನೆ–1
9ನೇ ನಿಯಮ ನೋಡಿ
ಅಧಿಸೂಚನೆ

ಶ್ರೀ:ಶ್ರೀಮತಿ **ದೀಪಲು ಚಂದು ಲಮಾಣಿ** ಇವರು ಸಹಶಿಕ್ಷಕರಾಗಿ ಕೆಬಿಎಸ್ ಹೆಗಡಿಹಾಳ ಎಲ್‌ಟಿ ತಾ.ವಿಜಾಪೂರ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು **ದಿಲಿಪ್ ಚಂದು ಚವ್ಹಾಣ** ಎಂದು ಬದಲಾವಣೆಗೆ ಅನುಮತಿ ನೀಡಲಾಗಿದೆ.

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಾಪೂರ.

ಪಿ.ಡಿ. 31